ನೈಸರ್ಗಿಕ ವಿಪತ್ತಿಗೆ ಒಳಗಾಗಿರುವುದು

1060 (1164) ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ರಾಜ್ಯದಾದ್ಯಂತ ಮಳೆ ಮತ್ತು ಬೆಂಕಿಯಿಂದ ನೈಸರ್ಗಿಕ ವಿಪತ್ತಿಗೆ ಒಳಗಾಗಿರುವ ದನ ಕರುಗಳು, ಮನೆ ಕೊಟ್ಟಿಗೆ ಬಣವಿಗಳನ್ನು ಕಳೆದು ಕೊಂಡವರಿಗೆ ಸರ್ಕಾರ ಎಷ್ಟು ಪರಿಹಾರ ನೀಡಲಾಗುತ್ತದೆ;

ಆ) ನೆಲಮಂಗಲ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನೈಸರ್ಗಿಕ ವಿಪತ್ತಿಗೆ ಒಳಗಾಗಿರುವ ಪ್ರಕರಣಗಳೆಷ್ಟು ಹಾಗೂ ಸರ್ಕಾರದಿಂದ ಎಷ್ಟು ಪರಿಹಾರ ನೀಡಲಾಗಿದೆ;

ಇ) ನೈಸರ್ಗಿಕ ವಿಪತ್ತಿಗೆ ಒಳಗಾಗಿರುವ ಪ್ರಕರಣಗಳಿಗೆ ಪರಿಹಾರ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಅತೀವೃಷ್ಟಿಯಿಂದ ಹಾನಿಯಾದ (ನೈಸರ್ಗಿಕ ವಿಪತ್ತು) ಧನ–ಕರುಗಳು ಮತ್ತು ಮನೆ, ಕೊಟ್ಟಿಗೆ ಹಾನಿಗೆ ಕೇಂದ್ರ ಸರ್ಕಾರದ ಎಸ್.ಡಿ.ಆರ್.ಎಫ್ ಮಾರ್ಗಸೂಚಿಯ ಪ್ರಕಾರ ಕೆಳಕಂಡಂತೆ ಪರಿಹಾರ ನಿಗಧಿಪಡಿಸಲಾಗಿದೆ.

ಜಾನುವಾರು ಹಾನಿ:

ದೊಡ್ಡ ಪ್ರಾಣಿ: ಎಮ್ಮೆ, ಹಸು, ` 16,400 – ಎತ್ತು 15,000/– ಎಮ್ಮೆ, ಹಸು, ಹಾಗೂ ಆನೆ ಮರಿ, ಕತ್ತೆ ಸಣ್ಣ ಕುದುರೆ, ` 10,000/–

ಚಿಕ್ಕ ಪ್ರಾಣಿ : ಕುರಿ, ಮೇಕೆ – ` 1,650/–

ಕೋಳಿ: ಪ್ರತಿ ಕೋಳಿಗೆ ` 37/– ರಂತೆ ಗರಿಷ್ಟ ` 400/–

ಮನೆ ಹಾನಿ (ಪ್ರತಿ ಮನೆಗೆ)

ಪಕ್ಕ ಮನೆ (ಪೂರ್ತಿ ಹಾನಿ)– ` 75,000/–

ಕಚ್ಚಾ ಮನೆ (ಪೂರ್ತಿ ಹಾನಿ)– ` 17,600/–

ತೀವ್ರ ಹಾನಿ:

ಪಕ್ಕ ಮನೆ – ` 12,600/–

ಕಚ್ಚಾ ಮನೆ – ` 3,800/–

ಭಾಗಶಃ ಹಾನಿ :

ಪಕ್ಕ ಮನೆ – ` 3,800/–

ಕಚ್ಚಾ ಮನೆ – ` 2,300/–

ಗುಡಿಸಲು ಮನೆ – ` 3,000/–

ಕೊಟ್ಟಿಗೆ – ` 1,500/–

ಬೆಂಕಿಯಿಂದ ಹಾನಿಯಾದ ಪ್ರಕರಣಗಳಿಗೆ ಪರಿಹಾರ ನೀಡಲು ಕೇಂದ್ರ ಸರ್ಕಾರದ ಎಸ್.ಡಿ.ಆರ್.ಎಫ್. ಮಾರ್ಗಸೂಚಿಯಲ್ಲಿ ಅವಕಾಶವಿರುವುದಿಲ್ಲ.

ಆ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 151 ಪಕ್ಕ ಮನೆಗಳು ಹಾನಿ ಯಾಗಿದ್ದು ಇವುಗಳಿಗೆ ಕೇಂದ್ರ ಸರ್ಕಾರದ ಎಸ್‌ಡಿಆರ್‌ಎಫ್ ಮಾರ್ಗ ಸೂಚಿ ಅಡಿಯಲ್ಲಿ ಒಟ್ಟು ` 2,52,845/– ಗಳನ್ನು ಪರಿಹಾರವಾಗಿ ಸಂತ್ರಸ್ಥರಿಗೆ ನೀಡಲಾಗಿದೆ.

ಇ) ಬಂದಿಲ್ಲ

ಈ) ಉದ್ಭವಿಸುವುದಿಲ್ಲ.